ಶೋಭಾ, ಬೆಂಗಳೂರು

ಸಿಗರೇಟಿನ ದುಷ್ಪರಿಣಾಮಗಳನ್ನು ತಿಳಿದಿರುವ ವೈದ್ಯರೇ ಸಿಗರೇಟ್ ಸೇದುವುದೇಕೆ?



ಎಲ್ಲರೂ ಒಂದಲ್ಲ ಒಂದು ದಿನ ಹೊಗೆ ಹಾಕಿಸಿಕೊಳ್ಳುವುದೇ ಎಂದು ಆಗಾಗ್ಗೆ ನೆನೆಯಲು.

ಬಿ. ಚಂದ್ರೇಗೌಡ, ಬೆಂಗಳೂರು

ಸೀರಿಯಲ್‌ಗೂ ಸೀರಿಯಲ್ ಕಿಲ್ಲರ್‌ಗೂ ಏನು ವ್ಯತ್ಯಾಸ?

ಸೀರಿಯಲ್ ಕಿಲ್ಲರ್ ಜನರನ್ನು ಕೊಲ್ಲುತ್ತಾನೆ. ಸೀರಿಯಲ್ ಸಂಸ್ಕೃತಿಯನ್ನು ಕೊಲ್ಲುತ್ತಿದೆ.

ವಿ. ಹೇಮಂತಕುಮಾರ್, ಬೆಂಗಳೂರು

ಗುಡಿಸಿದರೆ ಕಸ ಇರಬಾರದು; ಬಡಿಸಿದರೆ ಹಸಿವು ಇರಬಾರದು. ಪ್ರೀತಿಸಿದರೆ?

ದೋಷ ಕಾಣಬಾರದು.

ಪಿ.ಜೆ. ರಾಘವೇಂದ್ರ, ಮೈಸೂರು

ಮುಖ್ಯಮಂತ್ರಿ ಚಂದ್ರು ಮತ್ತು ಸಿ.ಎಂ. ಇಬ್ರಾಹಿಂ ಇವರಿಬ್ಬರಿಗೂ ಏನು ವ್ಯತ್ಯಾಸ?



ಇಬ್ರಾಹಿಂ ಹುಟ್ಟಾ ಸಿಎಂ. ಚಂದ್ರು ವೇದಿಕೆಯಲ್ಲಿ ಜನಮೆಚ್ಚುಗೆ ಗಳಿಸಿದ ಮುಖ್ಯಮಂತ್ರಿ.

ಮಲ್ಲಿಕಾರ್ಜುನ, ಸುರಧೇನುಪುರ

ಜೆಟ್ ಕಾಲದಲ್ಲೂ ‘ಶರವೇಗ’ ಪದ ಬಳಕೆಯ ಹಿಂದಿನ ಉದ್ದೇಶವೇನು?

ಅರ್ಜುನನ ಬಾಣ ದೇವಲೋಕವನ್ನು ತಲುಪಿತ್ತು. ಆ ಎಸ್ಕೇಪ್ ವೆಲಾಸಿಟಿ ಜೆಟ್‌ಗಳಿಗಿಲ್ಲ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಅಕಾಲ ಮೃತ್ಯುವಿಗೂ, ಸಕಾಲ ಮೃತ್ಯುವಿಗೂ ವ್ಯತ್ಯಾಸವೇನು?

ಆಸ್ತಿಯಿದ್ದು ವಿಲ್ ಮಾಡದೆ ಸತ್ತರೆ ಅಕಾಲಮೃತ್ಯು. ತೀರಿಸಲಾರದಷ್ಟು ಸಾಲವಿದ್ದಾಗ ಸತ್ತರೆ ಸಕಾಲಮೃತ್ಯು.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ನಿಮಗೇನಾದರೂ ಮಂತ್ರಿಗಿರಿ ಸಿಕ್ಕರೆ ಯಾವ ಖಾತೆಗೆ ಬೇಡಿಕೆ ಸಲ್ಲಿಸುವಿರಿ ಸರ್?

ತಾನಾಗಿ ದೊರೆತ ಯಾವ ಖಾತೆಯಾದರೂ ಸರಿ; ಹೆಣ ಹೊರುವವನಿಗೆ ಹಿಂದೇನು, ಮುಂದೇನು!

ಅನಸೂಯ ಟಿ, ಕೇದಿಗೆಮನೆ

ಎಲ್ಲವೂ ಅಳಿದ ಮೇಲೆ ಉಳಿಯುವುದು ಏನು?

ಕೆಮಿಕಲ್ಸ್ ಇದ್ದೇ ಇರುತ್ತವಲ್ಲ. ಪುನರಪಿ ಅಮೀಬಾ ಪುನರಪಿ ಹ್ಯೂಮನ್ ಪುನರಪಿ ಪಲ್ಯೂಷನ್ನೇ ಶಯನಂ.

ರತ್ನಜ, ಮೈಸೂರು

ಸೂತಕ ಬಂತೆಂದು ದೇವರಮನೆಯ ಬಾಗಿಲು ಹಾಕುವರಲ್ಲ, ದೇವರಿಗೂ ಮೈಲಿಗೆ ತಗುಲುವುದೆ?

ಹಾಗೇನಿಲ್ಲ. ಕೆಸರಿನ ಕೈಯಲ್ಲಿ ಟವೆಲ್ಲನ್ನು ಹೇಗೆ ಮುಟ್ಟುವುದಿಲ್ಲವೋ ರಾಡಿಯಾದ ಮನದಲ್ಲಿ ಪೂಜೆ ವರ್ಜ್ಯವಷ್ಟೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ರಾಜಕೀಯದಲ್ಲಿ ಇರಬೇಕಾದ್ದು ಧರ್ಮರಾಜನೋ ಯಮಧರ್ಮರಾಜನೋ?

ಯಮ ನಿಯಮವಿರುವ ಹರಿಶ್ಚಂದ್ರ. ಆದರೆ ಇರುವವರು ನಕ್ಷತ್ರಿಕರು!

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು

ಈ ರಾಮನ ಬಾಣ ಗುರಿ ತಪ್ಪಿದ್ದುಂಟೆ?

ಕೆಲವೊಮ್ಮೆ ಅರ್ಥವಾಗದೆ, ಸಿಕ್ಕಬೇಕಾದ ಗರಿ ತಪ್ಪಿದ್ದುಂಟು.

ಅಮರಯ್ಯಾ ಪತ್ರಿಮಠ, ಸುರಪುರ

ಈ ಪ್ರಪಂಚದಲ್ಲಿ ಅನಾಮಿಕರು ಯಾರು?

ಸಮಾಜಕ್ಕೆ ಏನೇನೂ ಕೊಡುಗೆ ಕೊಡದವರೆಲ್ಲರೂ ಅನಾಮಿಕರೇ.

ವಿ. ಹಮೀದ್, ವಿಟ್ಲ

ಯುವತಿ ಒಪ್ಪುತ್ತಾಳೆ. ತಾಯಿ ಒಪ್ಪುವುದಿಲ್ಲ. ಏನು ಮಾಡಲಿ?

ಮದುವೆಯಾಗಿಬಿಡಿ. ಕರುವಿದ್ದಲ್ಲಿ ಹಸು ಬಂದೇ ಬರುತ್ತದೆ.

## ವಾರದ ಪ್ರಶ್ನೆ

ಶೀಲಾ ಸತ್ಯೇಂದ್ರಸ್ವಾಮಿ, ಹರವೆ

ಬುದ್ಧಿವಂತರ ತಲೆಯಲ್ಲಿ ಕೂದಲು ಇರುವುದಿಲ್ಲವಂತೆ, ಹೌದಾ ಸರ್?

ಈ ಪ್ರಶ್ನೆಯನ್ನು ಕಂಡ ಐನ್‌ಸ್ಟೈನ್ ಮತ್ತು ಕಲಾಮರು ಹೊಟ್ಟೆ ಹುಣ್ಣಾಗುವಂತೆ ನಗುತ್ತಿದ್ದಾರಂತೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಭಕ್ತಿಗೆ ಮತ್ತು ನಂಬಿಕೆಗೆ ಇರುವ ಅಂತರವೇನು?

ನಂಬಿಕೆ ಅಲುಗಾಡುವ ಸಾಧ್ಯತೆಯಿರುತ್ತದೆ; ಭಕ್ತಿ ಅಚಲ.

ಬೂಕನಕೆರೆ ವಿಜೇಂದ್ರ, ಮೈಸೂರು

ಶ್ರೀಮಂತರಿಗಿಂತಲೂ ಕುಡುಕರೇ ಹೆಚ್ಚು ದಾನ–ಧರ್ಮ ಮಾಡುತ್ತಾರಲ್ಲ...?

ಹೆಂಡದ ನಶೆಯಲ್ಲಿ ಕೈ ಸಡಿಲವಾಗುತ್ತದೆ; ಧನದ ನಶೆಯಲ್ಲಿ ಕೈ ಭದ್ರವಾಗುತ್ತದೆ.

ಜೀವಿ, ಗೊಂಡೇದಹಳ್ಳಿ

ರೇಷನ್ ತರಲು ತಡವಾದರೂ ಸಹಿಸುವ ಮನೆಯಾಕೆ ಮೊಬೈಲ್ ಕರೆನ್ಸಿ ಹಾಕಿಸಲು ತಡವಾದರೆ ಗುಡುಗುವಳಲ್ಲಾ?



ರೇಷನ್ ನಿಧಾನವಾದಾಗ ಸ್ವಿಗ್ಗಿಗೆ ಆರ್ಡರ್ ಮಾಡಲು ಕರೆನ್ಸಿ ಬೇಕಲ್ಲ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ವೈದ್ಯರು ಕೊಡುವ ಚುಚ್ಚುಮದ್ದಿಗೂ ನೀವು ಕೊಡುವ ಚುಚ್ಚುಮದ್ದಿಗೂ ಏನು ವ್ಯತ್ಯಾಸ?

ಅದು ‘ಹಾ!’ ಎನ್ನಿಸುತ್ತದೆ; ಇದು ‘ಆಹಾ!’ ಎನ್ನಿಸುತ್ತದೆ.

ಕಾಳೀಹುಂಡಿ ಶಿವಕುಮಾರ್, ಮೈಸೂರು

ನೊಂದ ಮನಸ್ಸನ್ನು ಪಳಗಿಸುವುದು ಹೇಗೆ?

ಮನಸ್ಸನ್ನು ವಿವೇಕದ ವೆಹಿಕಲ್‌ನಲ್ಲಿ ಕೂಡಿಸಿಕೊಂಡು ಲವಲವಿಕೆಯ ರಸ್ತೆಯಲ್ಲಿ ಕರೆದುಕೊಂಡು ಹೋಗಿ.

■ ರಾಮ್